



ಬಂಗಾಳಿ ಮೂಲ: **ಚಿತ್ರಾ ಲಹರಿ**
ಕನ್ನಡಕ್ಕೆ: **ನಾಗಮಣಿ ಎಸ್. ಎನ್. | ಸರಸಿಜ ಆರ್.**
ಚಿತ್ರ: ಸತೀಶ್ ಬಿರಾದಾರ್

# ಮಾಧವಿಲತಾ

ರಿಯಾ ಬಾಲ್ಕನಿಯ ಗ್ರಿಲ್ ಹತ್ತಿರ ಬಂದು ನಿಂತಳು. ಸಂಜೆಯಾಗುತ್ತಾಯಿತ್ತು. ಆಶ್ವೀಜ ಮಾಸದ ಕೊನೆಯ ದಿನಗಳ ಆ ಸಂಜೆಯ ಆಕಾಶದತ್ತ ನೋಡಿದಳು. ಬೆಳಿಗ್ಗೆ ಒಂದು ಸಲ ಮಳೆ ಬಂದು ಹೋಗಿತ್ತು. ದಿನಗಳ ಅವಧಿ ಕಡಿಮೆಯಾಗುತ್ತಾಯಿದೆ. ಇನ್ನೊಂದು ಕ್ಷಣದಲ್ಲಿ ರಪ್ಪಂತ ಸಂಜೆಯಿಳಿದೇಬಿಡುತ್ತೆ. ಹಸಿರು ಗ್ರಿಲ್‌ನ ಮೇಲೆ ತಲೆಯಿರಿಸುತ್ತಾ ರಿಯಾ ದೃಷ್ಟಿಯನ್ನು ಕೆಳಗಿಳಿಸಿದಳು, ಎದುರಿಗೆ ವಿಶಾಲ ಬಯಲು. ಅಲ್ಲಿ ಮೊದಲು ಒಂದು ಕೆರೆ ಇತ್ತು. ಕಸ ಸುರಿದು ಮುಚ್ಚಿದ್ದರೂ ಪೂರ್ತಿ ಮುಚ್ಚಿಹೋಗದೆ ಕೆರೆ ಅನೇಕ ದಿನಗಳಿಂದ ಹಾಗೇ ಬಿದ್ದಿದೆ. ಬಹಳ ದೊಡ್ಡ ಜಾಗ. ಯಾರೋ ಬಿಲ್ಡರ್ ಅಲ್ಲಿ ದೊಡ್ಡ ಅಪಾರ್ಟ್‌ಮೆಂಟ್ ಮಾಡಬೇಕು ಅಂತ ಅಂದುಕೊಂಡಿರಬಹುದು. ಕೊನೆಗೆ ಅದೂ ಆಗಲಿಲ್ಲ. ಎಲ್ಲರಿಗೂ ಗೊತ್ತು ಇದರ ವ್ಯಾಜ್ಯ ಕೋರ್ಟಿನಲ್ಲಿದೆ ಅಂತ. ಆ ಜಾಗದಲ್ಲಿ ತುಂಬಾ ನೀರು ನಿಂತಿದೆ. ಮಳೆಗಾಲ ಮುಗಿದರೂ ದಿನಾ ಈ ಊರಲ್ಲಿ, ಶರತ್ಕಾಲದಲ್ಲೂ ಮಳೆ ಬರುತ್ತಾಯಿರುತ್ತೆ. ಇವತ್ತೂ ಕೂಡ, ಬೆಳಿಗ್ಗೆ ರಪರಪ ಅಂತ ಮಳೆ ಸುರೀತು. ತರಾತುರಿಯಲ್ಲಿ ಕೆರೆಯನ್ನು ಮುಚ್ಚಿರುವುದರಿಂದ ಜಾಗ ಇನ್ನೂ ತಗ್ಗಾಗೆ ಇದೆ. ಇಡೀ ವರ್ಷ ಕಳೆ ತುಂಬಿಕೊಂಡಿರೋ ಈ ಜಾಗ ಮಳೆಗಾಲದಲ್ಲಿ ಬಹುತೇಕ ದಟ್ಟ ಕಾಡಾಗಿ ಬದಲಾಗಿಬಿಡುತ್ತೆ. ಹುಲ್ಲು ತಲೆಯೆತ್ತಿ ಎರಡರಿಂದ ನಾಲ್ಕು ಅಡಿಯವರೆಗೆ ಬೆಳೆದು ನಿಲ್ಲುತ್ತದೆ. ಕೆಸವೆ ದಂಟು, ಕಳ್ಳಿಗಿಡ, ಹೆಸರೇ ಗೊತ್ತಿಲ್ಲದ ಎಷ್ಟೊಂದು ಮರಗಿಡಗಳು ತುಂಬಿಕೊಂಡಿವೆ. ಗಿಡಮರಗಳ ಮಧ್ಯೆಮಧ್ಯೆ ಇರುವ ಜಾಗದಲ್ಲಿ ನಿಂತಿರುವ ಕಪ್ಪಾದ ಕೊಳಕು ನೀರು ಕಾಣಿಸುತ್ತಿದೆ. ಆ ಜಾಗವನ್ನು ದೊಡ್ಡದೊಡ್ಡ ಮರಗಳು ಸುತ್ತುವರಿದಿವೆ. ದೇವಕಣಗಿಲೆ ಮರದಲ್ಲಿ ಈಗ ಹೂ ಕಡಿಮೆ. ಹೊಳೆ ದಾಸವಾಳದ್ದೂ ಅದೇ ಸ್ಥಿತಿ. ಬಿಳಿ ಮಂದಾರ ಹೂವಿನ ಗಿಡ ಚೆನ್ನಾಗಿ ಬೆಳೆದು ತಲೆಯೆತ್ತಿ ರೆಂಬೆಕೊಂಬೆ ಹರಡಿಕೊಂಡಿದೆ. ಒಂದೆರಡು ಪಪ್ಪಾಯ ಗಿಡಗಳೂ ಇವೆ. ಹಕ್ಕಿಗಳು ಬೀಜ ತಂದು ಹಾಕಿರಬಹುದು. ಇಡೀ ದಿನ ಅಲ್ಲಿ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಾ ಹಾರಾಡುತ್ತಾ ಕೂಗುತ್ತಿರುವುದನ್ನ ನೋಡಬಹುದು. ಆ ಹಕ್ಕಿಗಳ ಹಾರಾಟ ನೋಡಲು ಆಗಾಗ್ಗೆ, ಬೇಕೆನಿಸಿದಾಗೆಲ್ಲಾ ಕೆಲಸ ಬಿಟ್ಟು ಬಾಲ್ಕನಿಗೆ ಬಂದು ನಿಂತುಕೊಳ್ಳುತ್ತಾಳೆ ರಿಯಾ.